
ಕಾಮಾಕ್ಷಿ

ಆ ದಿನ ನಡುರಾತ್ರಿ ಕಾಫ್ ಪಂಚಾಯಿತಿ ಗುಟ್ಟಾಗಿ ನಡೆದಿತ್ತು. ಮನೆತನದ ಮರ್ಯಾದೆ, ಯಲ್ಲವ್ವನ ಅವಕೃಪೆ, ಊರಿನವರ ಅಂಜಿಕೆಯಿಂದಲೇ ಆ ಬಡಪಾಯಿ ವೃದ್ಧೆ ಸಭೆಗೆ ಧಾವಿಸಿ ಬಂದಿದ್ದರು. ‘ಸಾಹುಕ್ರಾ, ಆಕೀನ್ ಒಪ್ಪೀಸಿನಿ ರೀ, ಈ ಸಲ ಕಾರ್ಯ ನಡೇಲಿ. ಯಾವ್ ಚಿಂತಿನೂ ಬ್ಯಾಡ್ರೀ’ ಎಂದು ಸಭೆಗೆ ದೈನ್ಯದಿಂದ ಮಾರೆಮ್ಮ ನುಡಿಯುತ್ತಿದ್ದರೆ, ನೆರೆದಿದ್ದ ಮುಖಂಡರಿಗೆ ಮೀಸೆ ತುದಿಯಲ್ಲೇ ಹುಸಿನಗೆ. ಇದಕ್ಕಾಗಿಯೇ ಬಂದಿದ್ದ ಕೆಲವು ಯುವಕರು – ‘ಆಕೀಗೆ ಬಾಳ್ ಕೊಡೋದಾ ನಾನೇ ರೀ’ ಎಂದು ಪೈಪೋಟಿ ನಡೆಸಿದ್ದರು. ಸಭೆ ತೀರ್ಮಾನದಂತೆ ಒಬ್ಬನ ಆಯ್ಕೆಯೂ ನಡೆದಿತ್ತು.

‘ಮುತ್ತು’ ಕಟ್ಟುವ ಅನಿಷ್ಟ ಆಚರಣೆಗೆ ಆ ಸಭೆ ನಡೆದಿತ್ತು. ‘ಗುಡ್ಡದ ಯಲ್ಲವ್ವ ಈ ಸಲ ನಮ್ಮ ಪೋರಿ ಕೈಬಿಡಲಿಲ್ಲ ರೀ’ ಎಂದು ಸಭೆಗೆ ಬಾಗಿ ಕೈ ಮುಗಿದು ಆ ವೃದ್ಧೆ ಮನೆ ಕಡೆ ಹೊರಟರು. ಮೌನದಿಂದಲೇ ಎಲ್ಲದಕ್ಕೂ ಒಪ್ಪಿಗೆ ನೀಡಿದ ಪೋರಿ ತಾಯಿ ಹುಲಿಗೆಮ್ಮ, ಅವ್ವ ಮಾರೆಮ್ಮನ ಮಾತು ಮೀರದ ಅಸಹಾಯಕಳು. ಅವರ ಎರಡನೇ ಪೋರಿಯನ್ನೇ ಈ ಕೂಪಕ್ಕೆ ತಳ್ಳುವ ಘನ ಘೋರ ತೀರ್ಮಾನವನ್ನು ಕಾಫ್ ಪಂಚಾಯಿತಿ ತೆಗೆದುಕೊಂಡಿತ್ತು.

ನಡುರಾತ್ರಿ ನಡೆದ ಗೌಪ್ಯ ಸಭೆಯ ಮರ್ಮ ಅರಿತ ಹದಿನಾರರ ಕಾಮಾಕ್ಷಿ; ಅಜ್ಜಿ ಮತ್ತು ಅವ್ವನ ಬರುವಿಕೆಗಾಗಿಯೇ ಕಾಯುತ್ತಿದ್ದಳು. ಪುಟ್ಟ ಗುಡಿಸಲಿನಲ್ಲಿ ಉರಿಯುತ್ತಿದ್ದ ಬುಡ್ಡಿ ದೀಪದ ಮಂದ ಬೆಳಕು ನೋಡುತ್ತಾ ‘ನಾನೊಂದು ತುಂಬೆಯೋ, ಕಕ್ಕೆಯೋ, ಕಣಗಿಲೆ ಹೂವಾಗಿಯೋ ಹುಟ್ಟಬಾರ್ದಾಗಿತ್ತೆ’ ಎಂದು ಮನದಲ್ಲೇ ನೋವಿನ ಪದಗಳನ್ನು ಪೋಣಿಸುತ್ತಿದ್ದಳು. ಲಗುಬಗನೇ ಗುಡಿಸಲಿಗೆ ಬಂದ ಅಜ್ಜಿ ಮಾರೆಮ್ಮ, ‘ಪಂಚಾಯ್ತಿಯೊಳಗಾ ಹೀಂಗಾ ನಡದೈತಿ. ಯಲ್ಲವ್ವನ ಮ್ಯಾಲಿ ಆಣೆ ಮಾಡು. ನಾಳಿಂದ್ ಸಾಲಿಗ್ ಹೋಗ್‌ಬ್ಯಾಡ’. ಹೀಗೊಂದು ಆದೇಶ ಹೊರಡಿಸಿದರು.

ಮುಂಜಾನೆ ಅಜ್ಜಿ ಮಾರೆಮ್ಮ ರೊಟ್ಟಿ ತಟ್ಟುತ್ತಾ ಹೊಗೆಯೊಳಗೆ ಮುಳುಗಿದ್ದರು. ಅವ್ವ ಹುಲ್ಲಿಗೆಮ್ಮ, ಬುಟ್ಟಿ ಹೊತ್ತು ಕೂಲಿ ಕೆಲಸಕ್ಕೆ ಹೊರಟರು. ಕಾಫ್ ಪಂಚಾಯಿತಿ ನಿರ್ಧಾರಕ್ಕೆ ಕಾಮಾಕ್ಷಿಯ ಮನಸ್ಸು ತೊಯ್ದಾಡುತ್ತಲೇ ಇತ್ತು. ಈ ಗೊಂದಲ, ಅಸಹಾಯಕತೆಯಲ್ಲೇ ಶಾಲೆಗೆ ಹೊರಟಳು. ಮುತ್ತು ಕಟ್ಟುವ ಆಚರಣೆಗೆ ಇನ್ನೇನು ದಿನ ಎಣಿಕೆ ಮಾತ್ರ ಉಳಿದಿತ್ತು. ಈ ವಿಷಯ ಹೇಗೋ ಹೊಸಪೇಟೆಯ ‘ಸಖಿ’ ಸಂಸ್ಥೆಗೆ ಮುಟ್ಟಿತು.

ಕಾಮಾಕ್ಷಿಯ ಊರು ಹಂಪಿ ಸಮೀಪದ ನಾಗೇನಹಳ್ಳಿ–ಡಣಾಪುರ. ಕೆಲವು ದೇವದಾಸಿ ತಾಯಂದಿರ ಕುಟುಂಬಗಳು ನೆಲೆಸಿರುವ ಕುಗ್ರಾಮ. ‘ಸಖಿ’ ಸಂಸ್ಥೆಯ ಡಾ. ಭಾಗ್ಯಲಕ್ಷ್ಮಿ ಮತ್ತು ಅವರ ತಂಡ ಗ್ರಾಮಕ್ಕೆ ಭೇಟಿ ಕೊಟ್ಟು ದೇವದಾಸಿ ಪದ್ಧತಿಯ ಕಾನೂನು ವಿಚಾರಗಳನ್ನು ಜನರ ಮುಂದಿಟ್ಟರು. ಆರಂಭದಲ್ಲಿ ಯಾರೂ ಸ್ಪಂದಿಸಲಿಲ್ಲ. ಕಾಮಾಕ್ಷಿಯ ಓದು ಮುಂದುವರಿಸುವ ಷರತ್ತಿನೊಂದಿಗೆ ಆ ಕುಟುಂಬಕ್ಕೆ ಆರ್ಥಿಕ ಸಹಾಯ ನೀಡಲು ‘ಸಖಿ’ ಸಂಸ್ಥೆ ಮುಂದೆ ಬಂದಿತು. ಆದರೂ, ಕಾಮಾಕ್ಷಿಗೆ ಹೊಡೆದು, ಬಡಿದು ಒಪ್ಪಿಸುವ ಪ್ರಯತ್ನ ನಡೆಯಿತು. ಮೊದಲೇ ಜರ್ಜರಿತವಾಗಿದ್ದ ಮನಸ್ಸನ್ನು ದೈಹಿಕ ಹಲ್ಲೆ ಗಾಸಿಗೊಳಿಸಿತು.

ನಾಳೆಗಳ ಬಗೆಗಿನ ಪ್ರಶ್ನಾರ್ಥಕ ಚಿಹ್ನೆಯೊಂದಿಗೇ ಕಾಮಾಕ್ಷಿ, ಎಸ್ಸೆಸ್ಸೆಲ್ಸಿ ಮುಗಿಸಿ ಹೊಸಪೇಟೆಯಲ್ಲಿ ಕಾಲೇಜು ಸೇರಿದರು. ಬದುಕು ಒಣಗಿದ ತರಗಲೆಯಂತೆ ಆಗಿತ್ತು. ರಜೆ ದಿನಗಳಲ್ಲಿ ತಾಯಿ ಜತೆ ಕೂಲಿ ಕೆಲಸಕ್ಕೆ ಹೋಗೋದು, ಅವರಿವರ ಹೀಯಾಳಿಕೆ ಮಾತು ಕೇಳೋದು ಮಾಮೂಲಿ ಆಯಿತು. ‘ಮುತ್ತು ಕಟ್ಟುವ ಕಾರ್ಯ ನಡೆದಿದ್ದರೆ ಇಷ್ಟೊತ್ತಿಗೆ ಒಂದ್ ಹಡೀತಿದ್ದಳು’ ಎನ್ನುವ ಊರಿನವರ ಕೊಂಕು ಮನಸ್ಸು ಇರಿಯುತ್ತಿತ್ತು. ಹೇಗೋ ದ್ವಿತೀಯ ಪಿಯು ಮುಗಿಸಿದ ಕಾಮಾಕ್ಷಿ, ಹೊಸಪೇಟೆಯಲ್ಲೇ ಬಿ.ಎ. ಪದವಿಗೆ ಸೇರಿಕೊಂಡರು. ‘ಸಖಿ’ ಸಂಸ್ಥೆ ಜೊತೆ ನಿರಂತರ ಒಡನಾಟ ಇತ್ತು. ಆದರೂ, ಕಾಫ್ ಪಂಚಾಯಿತಿ ನಿರ್ಧಾರ ಮುರಿಯುವಂತಿರಲಿಲ್ಲ. ಯಲ್ಲವ್ವನ ಮೇಲೆ ಆಣೆ–ಪ್ರಮಾಣ, ಅಜ್ಜಿಯ ಖಡಕ್ ಮಾತು, ಸಂಬಂಧಿಗಳ ಕುಹಕ ನೋಟ ದೊಡ್ಡ ಉರುಳಾಗಿ ಸುತ್ತಿಕೊಂಡಿತ್ತು.

ಬದುಕು ಮುಳುಗಿ ತೇಲುವ ಹೊತ್ತಿಗೆ ‘ಸಖಿ’ ಸಂಸ್ಥೆ ನೆರವಿನಲ್ಲಿ ಮಂಗಳೂರಿನಲ್ಲಿ ನಡೆದ ಕಾನೂನು ಶಿಬಿರದಲ್ಲಿ ಕಾಮಾಕ್ಷಿ ಪಾಲ್ಗೊಂಡರು. ಕಾಫ್ ಪಂಚಾಯಿತಿಗೆ ಕಾನೂನು ಮಾನ್ಯತೆ ಇಲ್ಲ ಅನ್ನೋದು ಅರಿವಿಗೆ ಬಂದದ್ದೇ ಅಲ್ಲಿ. ಪ್ರಶ್ನಿಸುವ ಮನೋಭಾವ ಬೆಳೆಸಿಕೊಂಡ ಕಾಮಾಕ್ಷಿ ಓದು ಮುಂದುವರಿಸಿದರು. ಮುತ್ತು ಕಟ್ಟುವ ವಿಚಾರ ದೂರವೇ ಉಳಿಯಿತು. ಅಜ್ಜಿ, ಅವ್ವನಿಗೂ ಇದೆಲ್ಲ ನಿಧಾನವಾಗಿ ಅರಿವಿಗೆ ಬಂತು. ಕಾಮಾಕ್ಷಿಯ ಉನ್ನತ ಓದಿನ ಕನಸಿಗೆ ‘ಸಖಿ’ ಒತ್ತಾಸೆಯಾಗಿ ನಿಂತುಕೊಂಡಿತು.

ಈ ನಡುವೆ ಕಾಮಾಕ್ಷಿ, ಕೆಲವು ಪದ್ಯಗಳನ್ನು ಬರೆದು ಗೋಷ್ಠಿಗಳಲ್ಲೂ ಭಾಗವಹಿಸಿದರು. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿಗೆ ದಾಖಲಾಗಲು ಅವಕಾಶವಿದ್ದರೂ, ದೇಶದ ಉನ್ನತ ಸಂಸ್ಥೆಗಳಲ್ಲಿ ಓದುವ ಹೆಬ್ಬಯಕೆ ಅವರಿಗಿತ್ತು. ಇದಕ್ಕೆ ಬೇಕಾದ ಇಂಗ್ಲಿಷ್, ಲೋಕಜ್ಞಾನ ಇಲ್ಲದೆ ಜಿಜ್ಞಾಸೆಯಲ್ಲಿದ್ದಾಗ ನೆರವಿಗೆ ಬಂದಿದ್ದೆ ಮಹಾರಾಷ್ಟ್ರದ ವಾರ್ಧಾದಲ್ಲಿರುವ ‘ನಳಂದ’